‘ಅದರ ಬಣ್ಣ ಯಾವುದು ? ನೆಂಪಿದೆಯೇನು?’

‘ಆಕಾಶ ನೀಲಿ ಇರಬೇಕು, ಬಿಳಿ ಹಾಗೂ ಕೆಂಪು ಬಣ್ಣದಲ್ಲಿ ಕಸೂತಿ ಹಾಕಿದ್ದೆ. ಈಗೆಲ್ಲ ಮಾಸಿ ಹೋಗಿರಬಹುದು’ ಸಾವರಿಸಿಕೊಂಡು ಜಾನು ಹೇಳಿದಳು.

‘ಹೋಗ್ಲಿ ಬಿಡಿ, ಹೀಗೇ ಕೇಳಿದೆ. ನಾನು ಬರ್ತೇನೆ’ ಎನ್ನುತ್ತ ಹೊರಬಂದರು. ಚಂದ್ರಪ್ಪನವರು ಗೇಟಿನವರೆಗೆ ಬಂದು ತನಗಿನ್ನೂ ಪವನ್‌ನ ಮೇಲೆ ಸಂಶಯವಿದೆ ಎನ್ನುತ್ತಾ ಅವರನ್ನು ಬೀಳ್ಕೊಟ್ಟರು. ನಟರಾಜ್ ನೇರವಾಗಿ ವೀರನಗರ ಪೊಲೀಸ್ ಸ್ಟೇಷನ್‌ಗೆ ಬಂದು ಪೊಲೀಸ್ ಜಾಲ ಹರಡಿ ಚೀಲದ ಶೋಧನೆ ಮಾಡಬೇಕಾಗಿ ಸಲಹೆಯಿತ್ತರು. ಮಾರುವೇಷದಲ್ಲಿ ಪೊಲೀಸ್ ಜಾಲ ಪವನ್‌ನ ಮನೆಯ ಒಳಹೊರಗುಗಳನ್ನು ಹುಡುಕಲು ಮತ್ತೊಮ್ಮೆ ಹೊರಟಿತು. ಚಿನ್ನಕ್ಕೂ ಚೀಲಕ್ಕೂ ಬಲವಾದ ನಂಟಿದೆ ಎಂದು ನಟರಾಜ್ ದೃಢವಾಗಿ ನಂಬಿದ್ದರು. ತರಕಾರಿ ಚೆಲ್ಲಿದ್ದ ಜಾಗದಲ್ಲಿ ಚೀಲವಿರಲಿಲ್ಲ ಹಾಗೂ ತರಕಾರಿ, ಮೀನು ವಿನಾಕಾರಣ ಚೆಲ್ಲುವುದಿಲ್ಲ ಎಂಬುದು ತಪಾಸಣೆಯ ದೃಷ್ಟಿಯಲ್ಲಿ ಮುಖ್ಯ ವಿಚಾರವೇ ಆಗಿತ್ತು. ಪೇಟೆಯ ಬದಿಗೆ ಬಂದ ನಟರಾಜ್‌ರಿಗೆ ಬಾಯಾರಿಕೆ ಆಗಿತ್ತು. ಜೀಪನ್ನು ರಸ್ತೆಯ ಬದಿಗೆ ನಿಲ್ಲಿಸಿ ಪಕ್ಕದ ಅಂಗಡಿಯಿಂದ ಎಳನೀರು ಕುಡಿಯುತ್ತ ನಿಂತು, ದಾರಿಹೋಕರ ಕೈಯಲ್ಲಿ ಚೀಲವಿದೆಯಾ? ಇದ್ದರೆ ಯಾವ್ಯಾವ ನಮೂನೆಯದ್ದು ಎಂದು ನೋಡುತ್ತಲೂ ಇದ್ದರು.

ಜೀಪ್ ಹತ್ತಿ ಹೊರಡಬೇಕಿದ್ದರೆ ‘ಸಾರ್, ಸಾರ್’ ಎನ್ನುತ್ತ ಒಬ್ಬ ಸಿವಿಲ್ ಡ್ರೆಸ್ಸಿನ ಕಾನ್‌ಸ್ಟೇಬಲ್ಲಿ ಓಡಿಬಂದ.

‘ಏನಪ್ಪ, ಏನಾಯ್ತು?’ ನಟರಾಜ್ ಕೇಳಿದರು.

‘ನೀವು ಹೇಳುವ ಅಂಥದ್ದೇ ಚೀಲ ಒಬ್ಬ ತೋಟದ ಕೆಲಸದವನ ಕೈಯಲ್ಲಿದೆ. ಓ ಅಲ್ಲಿ ಆ ಮೂರನೇ ಅಂಗಡಿಯಲ್ಲಿ ರೇಷನ್ ಕೊಳ್ತಾ ಇದ್ದಾನೆ’ ಎಂದ. ಜೀಪಿನಿಂದಿಳಿದು ನಟರಾಜ್ ಅಲ್ಲಿಗೆ ಓಡಿದರು. ಆತ ರೇಷನ್ ತುಂಬಿಕೊಂಡು ಅಂಗಡಿಯಿಂದ ಹೊರಟಿದ್ದನಷ್ಟೆ. ನಟರಾಜರಿಗೆ ನಂಬಲಾಗಲಿಲ್ಲ. ತನ್ನ ಮೊದಲ ಜಯ ಎಂದುಕೊಳ್ಳುತ್ತ ನಟರಾಜ್ ಚೀಲವನ್ನು ಪರಿಶೀಲಿಸಿದರು. ಚೀಲ ಮಾಸಿತ್ತಾದರೂ ಕಸೂತಿ ಮಾಸಿರಲಿಲ್ಲ. ಆತನನ್ನು ನಟರಾಜ್ ಬದಿಗೆ ಕರೆದರು.

‘ಚೀಲ ಎಲ್ಲಿಂದ ಕೊಂಡೆ?’

‘ಇದು ಕೊಂಡದ್ದಲ್ಲ ಬುದ್ದೀ..., ನಮ್ಮೆಜಮಾನ್ರ ತೋಟದ ಗೊಬ್ಬರದ ಗುಂಡಿಯಲ್ಲಿ ಬಿದ್ದಿತ್ತು. ಕೆಲಸ ಮುಗಿಸಿ ವಾಪಾಸು ಬರೋ ಹೊತ್ತಿಗೆ ಕಂಪೋಸ್ಟ್ ಗೊಬ್ಬರದ ಗುಂಡಿಯಲ್ಲಿ ಇದನ್ನು ಕಂಡು ಒಂದು ಕೋಲು ತಗಂಡು ಮೇಲಕ್ಕೆ ಹಾರಿಸಿಬಿಟ್ಟೆ ಬುದ್ದೀ. ಇಷ್ಟು ಚೆನ್ನಾಗಿರೋ ಚೀಲ ರೇಷನ್ ತರ್ಲಿಕ್ಕಾಯ್ತೂಂತ ತಗೊಂಡೆ’.

ಜಾನು ಹೇಳಿದ ನವಿಲುಗಳು ಹಾಗೂ ಶೀಲ ಎಂಬ ಕಸೂತಿ ಚೀಲದ ಹೊರಗೆ ಕಾಣಿಸುತ್ತಿತ್ತು. ಕುಚ್ಚೆದ್ದು ಚೀಲದ ಅಕ್ಷರಗಳು ಮಾಸಿ ಹೋಗಿದ್ದವು. ಒಮ್ಮೆ ಮೂಸಿ ನೋಡಿದ. ಮೀನಿನ ವಾಸನೆ ಅವರ ಅಭಿಪ್ರಾಯವನ್ನು ಮತ್ತಷ್ಟು ದೃಢಪಡಿಸಿತು. ಅದರಲ್ಲಿದ್ದ ಅಕ್ಕಿಯನ್ನು ಆತನ ಲುಂಗಿಯ ಮಡಿಲಿಗೇ ಸುರಿದು, ಕಾನ್‌ಸ್ಟೇಬಲನ್ನೂ ಹತ್ತಿಸಿ, ಚೀಲದೊಂದಿಗೆ ಜೀಪ್ ಸ್ಟಾರ್ಟ್ ಮಾಡಿದರು.

ಹೊರಡಬೇಕಿದ್ದರೆ, ‘ನಿಮ್ಮ ಯಜಮಾನ್ರ ಹೆಸರೇನೋ?’ ಎಂದು ನಟರಾಜ್ ಕೇಳಿದರು.

‘ಸಣ್ಣೋರಾ ದೊಡ್ಡೋರಾ ಬುದ್ದೀ?’ ಆತ ಮರುಪ್ರಶ್ನೆ ಹಾಕಿದ.

‘ಸಣ್ಣೋರು’ ಎಂದರು ನಟರಾಜ್.

‘ಪವನಪ್ಪಾಂತ ಬುದ್ದೀ’ ಎಂದು ಹೇಳುತ್ತಿದ್ದಂತೆಯೆ ಜೀಪ್ ನೇರವಾಗಿ ಮಾದೇವಿ ಎಸ್ಟೇಟಿನ ಒಳಗೆ ಸಾಗಿತು. ಆ ಹೊತ್ತಿಗೆ ಪವನ್ ತನ್ನ ಬ್ರೀಫ್‌ಕೇಸನ್ನು ಸಿದ್ಧಗೊಳಿಸಿ, ಪ್ರಯಾಣಕ್ಕೆ ಬೇಕಾದ ಬಟ್ಟೆಬರೆಗಳನ್ನು ಅದರಲ್ಲಿ ತುಂಬಿಸಿ, ಬೈಕಿನ ಬಾಕ್ಸಿಗೆ ತಳ್ಳಿ ದೂರದ ಯಾವುದೋ ಊರನ್ನು ಗಮನದಲ್ಲಿರಿಸಿ ಹೊರಟಿದ್ದ. ಇನ್ನು ಅಲ್ಲೇ ಇದ್ದರೆ ತನಗೆ ಉಳಿಗಾಲವಿಲ್ಲ ಎಂಬುದು ಆತನ ಅನಿಸಿಕೆಯಾಗಿತ್ತು.

ಜೀಪು ಮಾದೇವಿ ಎಸ್ಟೇಟ್‌ಮನೆಯ ಸನಿಹಕ್ಕೆ ತಲುಪುತ್ತಿದ್ದಂತೆ ಎದುರಿನಿಂದ ಬುಲೆಟ್ ಬೈಕು ಢಂಢಂ ಸದ್ದು ಮಾಡುತ್ತಾ ಅದರ ಪಕ್ಕದಲ್ಲಿ ರಭಸವಾಗಿ ಸಾಗಿತು.

‘ಅದು ಪವನ್‌ನ ಬೈಕ್’ ಎಂಬುದಾಗಿ ಕಾನ್‌ಸ್ಟೇಬಲ್ ಕೂಗಿ ಹೇಳಿದ. ನಟರಾಜರಿಗೆ ಬೈಕ್‌ನ ಸದ್ದು ಕೇಳುತ್ತಲೇ ಗೊತ್ತಾಗಿಬಿಟ್ಟಿತು. ಮುಂದಕ್ಕೆ ಹೋದವರೇ ರಭಸವಾಗಿ ಮನೆಯ ಅಂಗಳದಲ್ಲಿ ಜೀಪು ತಿರುಗಿಸಿ ಬೈಕನ್ನು ಹಿಂಬಾಲಿಸಿದರು. ಟಾರ್ ರಸ್ತೆ ಬಂದ ತಕ್ಷಣ ಬೈಕ್ ಯಾವ ದಿಕ್ಕಿನಲ್ಲಿ ಹೋಗಿರಬಹುದೆಂಬುದನ್ನು ಮಣ್ಣಿನಲ್ಲಿ ಹೊರಳಿದ ಬೈಕ್‌ನ ಚಕ್ರದ ಗುರುತಿನಿಂದ ಪತ್ತೆ ಹಚ್ಚಿದರು. ಮೇಲಾಗಿ ಪವನ್ ವೀರನಗರದ ಕಡೆಗೆ ಹೋಗುವ ಸಾಧ್ಯತೆ ಕಡಿಮೆಯಿದ್ದುದರಿಂದ ಜೀಪು ವಿರುದ್ಧ ದಿಕ್ಕಿಗೆ ತಿರುಗಿ ವೇಗವಾಗಿ ಸಾಗಿತು. ತನ್ನನ್ನು ಮಟ್ಟಹಾಕಲೆಂದೇ ಬರುತ್ತಿರುವ ಜೀಪದು ಎಂಬುದರಲ್ಲಿ ಪವನ್‌ಗೆ ಸಂದೇಹವಿರಲಿಲ್ಲ. ಬೈಕ್‌ನ ವೇಗ ಮತ್ತೂ ಹೆಚ್ಚಿತು. ಅದನ್ನು ಮೀರಿಸುವ ವೇಗದಲ್ಲಿ ಜೀಪು ಸಾಗಿದ್ದರಿಂದ ಒಂದಷ್ಟು ದೂರದಲ್ಲಿ ಪವನ್‌ನ ಬೈಕ್ ಕಣ್ಣಿಗೆ ಬಿತ್ತು. ಬಹುದೂರದವರೆಗೆ ಒಂದನ್ನೊಂದು ಹಿಂದೆ ಹಾಕಿ ಸ್ಪರ್ಧಿಸಿದುವು.

ಕೊನೆಗೊಂದು ಹಂತದಲ್ಲಿ ಬೈಕ್‌ನ ಬಲಬದಿಯ ಬಾಕ್ಸಿಗೆ ಜೀಪಿನ ಮುಂತುದಿ ಘಟ್ಟಿಸಿತು. ನಿಯಂತ್ರಣ ತಪ್ಪಿದ ಬೈಕ್ ಹತ್ತಾರು ಮಾರು ದೂರ ಪವನ್‌ನನ್ನು ಕಿತ್ತೆಸೆದು ಘಟ್ ಘಟ್ ಎಂದು ಸದ್ದು ಮಾಡುತ್ತಲೇ ಧರಾಶಾಯಿಯಾಯಿತು. ಬೈಕ್‌ನಲ್ಲಿದ್ದ ಸೂಟ್ ಕೇಸ್ ರಟ್ಟಿ, ನೆಲಕ್ಕೆ ಅಪ್ಪಳಿಸುತ್ತಲೇ ಅದರ ಬಾಯಿ ತೆರೆದುಕೊಂಡಿತು. ಬಟ್ಟೆಬರೆ, ಒಳಗಿದ್ದ ಪ್ಲಾಸ್ಟಿಕ್ ಚೀಲವೆಲ್ಲ ಬಿಚ್ಚಿ ಬೆತ್ತಲೆಯಾಯಿತು. ನಿರುತ್ತರನಾದ ಪವನ್ ಬಿದ್ದಲ್ಲಿಂದಲೇ ಅಸಹಾಯಕನಾಗಿ ಚಿನ್ನದ ಚೀಲದ ಕಡೆಗೂ ನಟರಾಜರ ಕಡೆಗೂ ನೋಡಿದ.

**14**

ವೀರನಗರದ ಪೊಲೀಸ್ ಸ್ಟೇಷನ್‌ನಲ್ಲಿ ಪವನ್‌ನ ವಿಚಾರಣೆ ನಡೆಯಿತು.

‘ಅಂದು ರಾತ್ರಿ. ಸುಮಾರು ಒಂಬತ್ತು ಗಂಟೆಯ ಹೊತ್ತು. ಬೈಕ್ ಹತ್ತಿ ನೆಟ್ಟಗೆ ಶೀಲಾಳ ಮನೆಗೆ ಹೋದೆ. ಗೇಟಿನ ಹೊರಗೆ ಬೈಕ್ ನಿಲ್ಲಿಸಿ ಮೆಟ್ಟಿಲೇರಿ ಮನೆಯ ಹತ್ತಿರಕ್ಕೆ ಹೋದರೆ ಇಡೀ ಮನೆ ಕತ್ತಲೆ. ಮನೆಯೊಳಗೆ ಯಾರೂ ಇದ್ದಂತಿರಲಿಲ್ಲ. ಕಾರು ಕೂಡ ಹೊರಗೆ ಕಾಣಿಸಲಿಲ್ಲ. ಹೀಗಾದದ್ದು ಒಳ್ಳೆಯದಾಯಿತು ಎಂದುಕೊಂಡೆ. ಒಂದು ಕ್ಷಣ ಬಾಗಿಲ ಕೊನೆಯ ಮೆಟ್ಟಿಲಲ್ಲಿ ನಿಂತು ಸುತ್ತಲೂ ವೀಕ್ಷಿಸಿದೆ. ಕರಿಮಾಯಿ ಗುಡ್ಡದ ಕಾಡು ಅಮಾವಾಸ್ಯೆಯ ಕತ್ತಲಲ್ಲಿ ಲಯವಾಗಿತ್ತು. ಕಾಡಿನ ನಡುವಿನಿಂದ ಹೊಮ್ಮುತ್ತಿದ್ದ ಜೀರುಂಡೆಗಳ ಧ್ವನಿಯ ಹೊರತಾಗಿ ಬೇರಾವ ಶಬ್ದವೂ ಇರಲಿಲ್ಲ. ನೀರವ ಮೌನ.’

‘ನಡುವೆ, ಅದು ಹೇಗೆ ಆ ಕತ್ತಲಲ್ಲಿ ನಿನಗವರ ಮನೆ ಪತ್ತೆಯಾಯಿತು? ಹಿಂದೆ ಎಂದಾದರೂ ಅಲ್ಲಿಗೆ ಹೋಗಿದ್ಯಾ?’ ಎಂದರು ಎಸ್‌ಐ.

‘ಹೌದು ಸರ್, ಒಂದು ಅವಕಾಶಕ್ಕಾಗಿ ಕಾಯುತ್ತಿದ್ದೆ.’

‘ಅವಕಾಶ ಅಂದ್ರೆ?’

ಒಂದು ಕ್ಷಣ ಮೌನಿಯಾದ ಪವನ್, ತನ್ನ ಒಂದೊಂದೇ ಗುಟ್ಟುಗಳು ಹೊರಬರುತ್ತಿವೆಯಲ್ಲ ಎಂದುಕೊಂಡು ಬೆದರಿದ.

‘ಯಾವ ರೀತಿಯ ಅವಕಾಶ? ಅವಳನ್ನು ಕೊಲ್ಲುವ ಅವಕಾಶವೆ? ಅಥವಾ?’ ಎಸ್‌ಐ ಮತ್ತೆ ಗರ್ಜಿಸಿದ.

‘ಇಲ್ಲ ಸರ್. ಖಂಡಿತ ಇಲ್ಲ. ನನಗೆ ವಿಪರೀತ ಹಣದ ಅಡಚಣೆ ಇತ್ತು. ಮನೆಯ ಬೀಗ ಮುರಿಯಲು ತೀರ್ಮಾನಿಸಿ ತಪ್ಪಿ ತಡವಿ ಬಾಗಿಲಿಗೆ ಬಂದೆ. ಅಲ್ಲಿ ತಲುಪಿದಾಗ ಪ್ರೊಫೆಸರ್ ಕಾರೂ ಇರಲಿಲ್ಲ. ಆಶ್ಚರ್ಯವೆಂದರೆ ಬೀಗ ಹಾಕಿರಲಿಲ್ಲ! ಬಾಗಿಲು ದೂಡಿ ಒಳಗೆ ಹೋದೆ. ಹಿಂದೊಮ್ಮೆ ನನ್ನನ್ನು ತಡೆದಾತ, ಕೆಲಸದ ಆಳು, ಅಲ್ಲಿದ್ದರೆ ಎಂಬ ಭಯ ಮನಸ್ಸಿನಲ್ಲಿತ್ತು. ಅವನೂ ಇರಲಿಲ್ಲ. ದೀಪ ಉರಿಸಬೇಕೆನಿಸಲಿಲ್ಲ. ಕೈಲಿದ್ದ ಟಾರ್ಚಿನ ಸಹಾಯದಿಂದ ಒಂದೊಂದು ಕೋಣೆಯನ್ನೂ ಪರಿಶೀಲಿಸುತ್ತ ಹೋದೆ. ‘ಶೀಲಾ ಶೀಲಾ...’ ಎಂದು ಪಿಸುಗುಟ್ಟಿದೆ. ನನ್ನ ಮೇಲಿನ ಅವಳ ಅಭಿಪ್ರಾಯ ಏನೇ ಇರಲಿ; ನನ್ನ ಬೈಕಿನ ದನಿ ಕೇಳಿದಾಗ ಎಲ್ಲಿದ್ದರೂ ಶೀಲಾ ಹೊರಕ್ಕೆ ಓಡಿ ಬರಬೇಕಿತ್ತು. ಕೊನೆಯ ಪಕ್ಷ ಕಿಟಕಿಯ ಎಡೆಯಿಂದಲಾದರೂ ಇಣುಕಬೇಕಿತ್ತು. ಒಳಗೆ ಕಾಲಿಟ್ಟು ಬೆಳಕು ಹಾಯಿಸಿದೆ. ಒಂದು ಬೆಡ್‌ರೂಮಿನ ಮಂಚಕ್ಕೆ ಬೆಳಕು ಹಾಯಿಸಿದಾಗ ಶೀಲಾ ಅಲ್ಲಿ ಮಲಗಿದ್ದಳು! ಚೆನ್ನಾಗಿ ನಿದ್ರೆ ಬಂದಿತ್ತು. ಬಾಗಿಲು ಹಾಕದೆ ಇವಳೇಕೆ ಮಲಗಿದಳು? ಬಹುಶಃ ಗಂಡನನ್ನು ಕಾಯುತ್ತ ಮಗ್ಗುಲಾದವಳಿಗೆ ಹಾಗೆಯೇ ನಿದ್ದೆ ಹತ್ತಿರಬೇಕು. ಮೆತ್ತಗೆ ಆಕೆ ಮಲಗಿದ್ದ ಕೋಣೆಯ ಬಾಗಿಲು ಮುಚ್ಚಿ ಹೊರಗಡೆಯಿಂದ ಚಿಲಕ ಹಾಕಿದೆ. ಹಾಗೆಯೇ ಮುಂಬಾಗಿಲ ಚಿಲಕ ಹಾಕಿ ಬಂದು, ಹಿಂಬಾಗಿಲು ತೆರೆದಿಟ್ಟೆ.’

‘ಮುಂದೆ’

(ಸಶೇಷ)